Date: 17-11-2025 OS No.87/2019

( DW - 2 )

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು ಶ್ರೀ ಎನ್ ಎಸ್ ಜಿ ವಾದಿ ಪರ ವಕೀಲರಿಂದಃ

ನಾನು ಪಿ ಯು ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾನು ಅಂಚೆ ಕಚೇರಿಯಲ್ಲಿ ಪೋಸ್ಟ ಮನ್ ಎಂದು ಸೇವೆ ಸಲ್ಲಿಸುತ್ತಾ ಇರುತ್ತೇನೆ. ವಾದಿಯು ನನ್ನ ದೊಡ್ಡಪ್ಪನ ಮಗಳು. ನನ್ನ ತಾತಾನ ಹೆಸರು ಕಲ್ಲಪ್ಪ. ಕಲ್ಲಪ್ಪನಿಗೆ 4 ಜನ ಮಕ್ಕಳು ಅವರೆಂದರೆ ಸತ್ಯಪ್ಪಾ, ಲಕ್ಷ್ಮಣ, ಮಹಾದೇವ ಮತ್ತು ಭೀಮಪ್ಪಾ. ವಾದಿಯು 2 ಸ್ವತ್ತುಗಳಿಗೆ ದಾವೆಯನ್ನು ಹಾಕಿದ್ದಾರೆ. ನಾನು ಈ ಪ್ರಕರಣದಲ್ಲಿ ತಕರಾರನ್ನು ಸಲ್ಲಿಸಿಲ್ಲ. 4 ನೇ ಪ್ರತಿವಾದಿಯು ಸಲ್ಲಿಸಿರುವ ಪ್ರತಿವಾದ ಪತ್ರದಂತೆ ಸಾಕ್ಷ್ಯ ನುಡಿಯಲು ನನಗೆ ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

ಕೊಟಭಾಗಿ ಗ್ರಾಮವು ಘಟಪ್ರಭಾ ನದಿಯ ದಡದಲ್ಲಿ ಇದೆ ಎಂದರೆ ಸರಿ. ಅಲ್ಲಿಯ ಜಮೀನುಗಳೆಲ್ಲವೂ ನೀರಾವರಿ ಜಮೀನುಗಳು ಎಂದರೆ ಸರಿ. ದಾವಾ ಸ್ವತ್ತುಗಳೆಲ್ಲವೂ ನೀರಾವರಿ ಜಮೀನುಗಳು ಎಂದರೆ ಸರಿಯಲ್ಲ. ಸರ್ವೆ ನಂ. 139/2 ರಲ್ಲಿ ಕಬ್ಬು ಬೆಳೆಯುತ್ತಾರೆ ಎಂದರೆ ಸರಿಯಲ್ಲ. ಅದಕ್ಕೆ ಸಂಬಂಧಿಸಿದ ಉತಾರದಲ್ಲಿ ಕಬ್ಬು ಎಂದು ನಮೂದಿಸಲಾಗಿದೆ ಎಂದರೆ ಮಾಡಿರಬಹುದು ಎಂದು ನುಡಿಯುತ್ತಾರೆ.

ಕೋಟಭಾಗಿ ಗ್ರಾಮದಲ್ಲಿಯ ಸರ್ವೆ ನಂ.143, 435, 139 ನೇ ಜಮೀನುಗಳು ನನ್ನ ತಾತಾ ಕಲ್ಲಪ್ಪನಿಗೆ ಅವರ ಹಿರಿಯರಿಂದ ಬಂದ ಜಮೀನುಗಳು ಎಂದರೆ ಸಾಕ್ಷಿಯು ಸರ್ವೆ ನಂ.143 ಮತ್ತು 139 ನೇ ಜಮೀನುಗಳು ಹಿರಿಯರಿಂದ ಬಂದ ಸ್ವತ್ತುಗಳು ಆದರೆ ಸರ್ವೆ ನಂ.435 ರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಕಲ್ಲಪ್ಪ ಇವರಿಗೆ ವಯಸ್ಸಾಗಿದ್ದರಿಂದ 1983 ರಲ್ಲಿ ತನ್ನ 4 ಜನ

Date: 17-11-2025 OS No.87/2019

( DW - 2 )

ಮಕ್ಕಳಿಗೆ ಪಾಲು ವಿಭಗಗ ಮಾಡಿ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಕೊಟ್ಟಿರಬಹುದು ಎಂದು ನುಡಿಯುತ್ತಾರೆ. ಸದರಿ ಪಾಲು ವಿಭಾಗದಂತೆ ಎಮ್ ಇ ನಂ.2945 ನೇದ್ದು ದಾಖಲಾಗಿ ಮಂಜೂರಾಗಿರುತ್ತದೆ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನಂತರ ಸದರಿ ಕಲ್ಲಪ್ಪನ 4 ಜನ ಮಕ್ಕಳು ಮತ್ತು ಕಲ್ಲಪ್ಪನು ಸರ್ವೆ ನಂ. 139 ಮತ್ತು 143 ಗಳನ್ನು ಅಭಿವೃದ್ಧಿ ಪಡಿಸುವ ಉದ್ದೇಶದಿಂದ ಸರ್ವೆ ನಂ. 435 ನೇದ್ದನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ಜಮೀನನ್ನು ಮಾರಾಟ ಮಾಡಿದ ನಂತರ ಕಲ್ಲಪ್ಪನ ಕುಟುಂಬಕ್ಕೆ ಸರ್ವೆ ನಂ. 139 ಮತ್ತು 143 ಗಳು ಮಾತ್ರ ಉಳಿದಿರುತ್ತವೆ ಎಂದರೆ ಸಾಕ್ಷಿಯು ಸರ್ವೆ ನಂ. 435 ರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ.

ಕಲ್ಲಪ್ಪನ 4 ಜನ ಮಕ್ಕಳು ಸರ್ವೆ ನಂ.139 ಮತ್ತು 143 ಗಳನ್ನು 4 ಭಾಗಗಳಾಗಿ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆಯ ಹೆಸರು ಮಹಾದೇವ. 1 ನೇ ಪ್ರತಿವಾದಿ ನನ್ನ ತಂದೆಯ ಸಹೋದರ. ನನ್ನ ತಂದೆಯ ಭಾಗಕ್ಕೆ ಬಂದ ಸರ್ವೆ ನಂಬರುಗಳ ಹಿಸ್ಸಾ ನೆನಪಿಲ್ಲ. ನನ್ನ ತಂದೆಗೆ ಸರ್ವೆ ನಂ.139 ಮತ್ತು 143 ಗಳಲ್ಲಿ ತಲಾ 1 ಹಿಸ್ಸೆ ಇರುತ್ತವೆ ಎಂದರೆ ಸರಿ. ಸರ್ವೆ ನಂ.435 ನೇ ಜಮೀನು ಈಗ್ಗೆ ನಮ್ಮ ಕುಟುಂಬಕ್ಕೆ ಯಾವುದೇ ಸಂಬಂಧ ಇಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಸರ್ವೆ ನಂ.435 ನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲವೆಂದು ಹೇಳಿಕೆ ನೀಡಿಲ್ಲ.

1 ನೇ ಪ್ರತಿವಾದಿಯ ಭಾಗಕ್ಕೆ ಬಂದ ಜಮೀನುಗಳ ಸರ್ವೆ ನಂ.139/2 ಮತ್ತು 143/1 ನೇ ಜಮೀನುಗಳು ಎಂದರೆ ಸರಿ. ಪಾಲು ವಿಭಾಗದ ನಂತರ 1 ನೇ ಪ್ರತಿವಾದಿ ಮತ್ತು ಅವನ ಕುಟುಂಬದ ಸದಸ್ಯರೆಲ್ಲರೂ ಸಾಮೂಹಿಕ ವಹಿವಾಟ ಉಪಭೋಗ ಮಾಡುತ್ತಾ ಬಂದಿರುತ್ತಾರೆ ಎಂದರೆ ಸರಿ. ಈ ದಾವೆಯು ಸರ್ವೆ

( DW - 2 )

ನಂ.139/2 ಮತ್ತು 143/1 ನೇ ಜಮೀನುಗಳಿಗೆ ಸಂಬಂಧಿಸಿದಂತೆ ನಡೆಯುತ್ತಾ ಇರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿಯ ಕುಟುಂಬದಲ್ಲಿ ಅವರಿಗೆ ಸಂಬಂಧಿಸಿದ ಕುಟುಂಬದ ಸ್ವತ್ತುಗಳಲ್ಲಿ ಯಾವುದೇ ಪಾಲು ವಿಭಾಗ ಆಗಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

1 ನೇ ಪ್ರತಿವಾದಿಗೆ, ವಾದಿ ಮತ್ತು 3 ಹಾಗೂ 4 ನೇ ಪ್ರತಿವಾದಿಯರು ಹೀಗೆ ಒಟ್ಟು ಮೂರು ಜನ ಮಕ್ಕಳು ಎಂದರೆ ಸರಿ. ವಾದಿಯ ಗಂಡನ ಕುಟುಂಬದ ಆರ್ಥಿಕ ಪರಿಸ್ಥಿತಿ ಚೆನ್ನಾಗಿದೆ ಎಂದರೆ ಸರಿ. 1 ನೇ ಪ್ರತಿವಾದಿಯ ಕುಟುಂಬವು ಆರ್ಥಿಕವಾಗಿ ಸದೃಢವಾಗಿರುತ್ತಾರೆ ಎಂದರೆ ಸಾಕ್ಷಿಯು ಅಷ್ಟೊಂದು ಇರುವುದಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಕುಟುಂಬಕ್ಕೆ ಸಾಲ ಇರಲಿಲ್ಲ ಎಂದರೆ ಸಾಕ್ಷಿಯು ಸಾಲ ಇತ್ತು ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಕುಟುಂಬಕ್ಕೆ ಸಾಲ ಇತ್ತು ಎಂದು ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಿಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ವಾದಿಯ ಮಗನ ಆಸ್ಪತ್ರೆಯ ಖರ್ಚಿಗಾಗಿ ಸತ್ಯಪ್ಪನು ಹಣವನ್ನು ಖರ್ಚು ಮಾಡಿರುತ್ತಾನೆ ಎಂದು ಹೇಳಿ ಬರೆಸಿಲ್ಲ. ಅದೇ ರೀತಿ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ವಾದಿಯ ಮದುವೆಗಾಗಿ 1 ನೇ ಪ್ರತಿವಾದಿಯು ಸಾಕಷ್ಟು ಖರ್ಚು ಮಾಡಿರುತ್ತಾನೆ ಎಂದು ಬರೆಸಿರುತ್ತೇನೆ. ಈ ಬಗ್ಗೆ ತೋರಿಸಲು ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ. ನನ್ನ ಅನುಕೂಲಕ್ಕಾಗಿ ಪ್ರಮಾಣ ಪತ್ರದ ಖಂಡಿಕೆ 8 ಮತ್ತು 9 ರಲ್ಲಿ ಸುಳ್ಳು ಹೇಳಿಕೆಗಳನ್ನು ನೀಡಿರುತ್ತೇನೆಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ತನ್ನ ಕುಟುಂಬದ ಸ್ವತ್ತುಗಳನ್ನು ಮಾರಾಟ ಮಾಡುವ ಅಡಚಣೆ ಯಾವತ್ತೂ ಬಂದಿರಲಿಲ್ಲ ಎಂದರೆ ಸರಿಯಲ್ಲ. ಸತ್ಯಪ್ಪನಿಗೆ ತನ್ನ ಹಿರಿಯರಿಂದ ಬಂದ ಸ್ವತ್ತುಗಳಲ್ಲಿ ಅವನ ಮಕ್ಕಳಿಗೂ ಸಹ ಸಮನಾದ ಹಿಸ್ಸೆ ಇರುತ್ತದೆ ಎಂದರೆ ಸರಿ. 1 ನೇ ಪ್ರತಿವಾದಿಯ ಕುಟುಂಬಕ್ಕೆ ಆರ್ಥಿಕ ಅವಶ್ಯಕತೆ ಇರಲಿಲ್ಲ ಮತ್ತು ಜಮೀನನ್ನು

Date: 17-11-2025 OS No.87/2019

( DW - 2 )

ಮಾರಾಟಕ್ಕೆ ತೆಗೆದಿರಲಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.139/2 ರ ಜಮೀನಿನಲ್ಲಿ ವಾದಿಗೂ ಸಹ ಹಕ್ಕು ಇರುವ ವಿಷಯ ನನಗೆ ಗೊತ್ತಿತ್ತು ಎಂದರೆ ಸರಿ. ನಾನು ಬರೆಯಿಸಿಕೊಂಡಿರುವ ಕ್ರಯ ಪತ್ರಕ್ಕೆ ವಾದಿಯರ ರುಜು ಇರುವುದಿಲ್ಲ ಎಂದರೆ ಸರಿ.

ಸರ್ವೆ ನಂ.139/2 ರ ಜಮೀನನ್ನು ನಾವು ಕ್ರಯಕ್ಕೆ ಪಡೆಯುವ ಪೂರ್ವದಲ್ಲಿ ವಾದಿಯನ್ನೂ ಸಹ ವಿಚಾರಿಸಿದ್ದೆವು, ಅವರು ಕ್ರಯ ಪತ್ರವಾಗುವ ದಿನ ಬರುತ್ತೇನೆ ಎಂದು ಹೇಳಿದ್ದರು. ನಾನು ವಾದಿಗೆ ನೋಟಿಸ್‌ನ್ನು ನೀಡಿಲ್ಲ. ವಾದಿಯನ್ನು ನಾನು ವಿಚಾರಿಸಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಅನುಕೂಲಕ್ಕಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಸರ್ವೆ ನಂ.139/2 ರಲ್ಲಿಯ ವಾದಿಯ ಹಕ್ಕನ್ನು ನಷ್ಟಗೊಳಿಸುವ ಉದ್ದೇಶದಿಂದ ನಾನು ಮತ್ತು 1 ರಿಂದ 4 ನೇ ಪ್ರತಿವಾದಿಯರು ಕೂಡಿಕೊಂಡು ಕ್ರಯ ಪತ್ರವನ್ನು ಸೃಷ್ಟಿಸಿರುತ್ತೇವೆಂದರೆ ಸರಿಯಲ್ಲ. ಕ್ರಮ ಸಂಖ್ಯೆ 1 ನೇ ಸ್ವತ್ತನ್ನು ಕ್ರಯಕ್ಕೆ ಪಡೆಯವ ಪೂರ್ವದಲ್ಲಿ ನಾನು ನಮ್ಮ ಇಲಾಖೆಯಿಂದ ಪೂರ್ವಾನತಿ ಪಡೆದಿಲ್ಲ. ನಾನು ಮತ್ತು 1 ರಿಂದ 4 ನೇ ಪ್ರತಿವಾದಿಯರು ಕೂಡಿಕೊಂಡು ಸೃಷ್ಟಿಸಿದ ನಾಮಕಾವಸ್ತೆ ಕ್ರಯ ಪತ್ರವಾಗಿದ್ದರಿಂದ ನಾನು ಇಲಾಖೆಯಿಂದ ಅನುಮತಿಯನ್ನು ಪಡೆದಿಲ್ಲ ಎಂದರೆ ಸರಿ. ನನ್ನ ಹೆಸರಿಗೆ ಆದಂತಹ ನಾಮಕಾವಸ್ತೆ ಕ್ರಯ ಪತ್ರವು ಸದರಿ ಸ್ವತ್ತಿನಲ್ಲಿಯ ವಾದಿಯ ಭಾಗಕ್ಕೆ ಬಂಧನಕಾರಿಯಾಗುವುದಿಲ್ಲ ಎಂದರೆ ಸರಿ. ದಾವಾ ಸ್ವತ್ತುಗಳು ವಾದಿ ಮತ್ತು 1 ರಿಂದ 4 ನೇ ಪ್ರತಿವಾದಿಯರ ಸಾಮೂಹಿಕ ಹಿಸ್ಸೆಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ವಾದಿಗೆ ಭಾಗ ಹೋಗುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ.

Date: 17-11-2025 OS No.87/2019

( DW - 2 )

**ಮರು ವಿಚಾರಣೆ - ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಹಿ/-

ಹಿರಿಯ ದಿವಾಣಿ ನ್ಯಾಯಾಧೀಶರು , ಹುಕ್ಕೇರಿ.